126	ಕಿತ್ತೂರ	721) ರಾಣಿ ರುದ್ರಮ್ಮ
		722) ತಯ್ಯಬಾ
		723) ಕಿರಣ
127	ತಿಮ್ಮಾಪೂರ	724) ರೈತಲಕ್ಷ್ಮಿ
128	ದೇಗುಲಹಳ್ಳಿ	725) ಭಾಗ್ಯಲಕ್ಷ್ಮಿ
		726) ವಿದ್ಯಾಶ್ರಿ
129	ಬೈಲೂರ	727) ಗಂಗಾಯಮುನ
130	ಬಸರಕೋಡ	728) ಮಹಾಲಕ್ಷ್ಮಿ
		729) ಗಂಗಾಬಿಕಾ
		730) ರೇಣುಕಾ
		731) ಭವಾನಿ
131	ಕತ್ರಿದಡ್ಡಿ	732) ದುರ್ಗಾದೇವಿ
132	ಹನುಮಹಟ್ಟಿ	733) ದೀಪಾ
133	ಕುಲವಳ್ಳಿ	734) ರಾಣಿಚೆನ್ನಮ್ಮಾ
		735) ಮಲಪ್ರಭಾ
		736) ರೋಷನಿ
134	ಗಲಗಿನಮಡ	737) ತೃಪ್ತಿ
		738) ಸೃಷ್ಟಿ
135	ಸಾಗರ	739) ರಾಣಿ ಚೆನ್ನಮ್ಮಾ

454 (5102) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಕಿತ್ತೂರು ಮತ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯ ಪಿಡಬ್ಲ್ಯೂಡಿ ರಸ್ತೆ ಸುಧಾರಣೆ ಕಾಮಗಾರಿಗಳು BINCO ಕಂಪೆನಿಯಿಂದ ನಿಧಾನಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಗುತ್ತಿಗೆ ಒಪ್ಪಂದದ ಪ್ರಕಾರ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಮುಕ್ತಾಯಗೊಳಿಸಲಾಗುವುದು,

ಇ) ಗುತ್ತಿಗೆದಾರರ ವಿಳಂಬಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಆ) ಹಾಗಿದ್ದಲ್ಲಿ ಗುತ್ತಿಗೆ ಒಪ್ಪಂದದ ಪ್ರಕಾರ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಮುಕ್ತಾಯಗೊಳಿಸಲಾಗುವುದು,

ಇ) ಗುತ್ತಿಗೆದಾರರ ವಿಳಂಬಕ್ಕೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)

ಅ) ಬೆಳಗಾವಿ ಜಿಲ್ಲೆ ಕಿತ್ತೂರ ಮತ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಲ್ಲಿ ಮಂಜೂರಾದ ಬಾಗೇವಾಡಿ–ಬಸ್ಸಾಪೂರ–ಮೊದಗೆ ರಸ್ತೆ ಸುಧಾರಣೆ ಕಾಮಗಾರಿಯನ್ನು ಮೆ ಬಿನ್ ಕೋ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತದೆ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಮಂದಗತಿಯಿಂದ ನಿರ್ವಹಿಸುತ್ತಿದ್ದಾರೆ

ಆ) ಗುತ್ತಿಗೆ ಒಪ್ಪಂದದ ಪ್ರಕಾರ ಸದರಿ ಕಾಮಗಾರಿಯನ್ನು ದಿನಾಂಕ 27 10 2005ರಲ್ಲಿ ಪ್ರಾರಂಭಿಸಿ ದಿನಾಂಕ 26 04 2006ರಂದು ಮಾಡಿ ಮುಗಿಸಬೇಕಾಗಿತ್ತು

ಇ) ಗುತ್ತಿಗೆದಾರರು ಕೆಲಸವನ್ನು ಮಂದಗತಿಯಿಂದ ನಿರ್ವಹಿಸುತ್ತಿದ್ದು ಗುತ್ತಿಗೆ ಕರಾರಿನ ಪ್ರಕಾರ ನಿಗದಿತ ಸಮಯದೊಳಗೆ ಪೂರ್ಣಗೊಳಿಸದ ಕಾರಣ ಸದರಿ ಗುತ್ತಿಗೆಯನ್ನು ಮೊಟಕುಗೊಳಿಸಿ ಮರು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ

455 (452) ಶ್ರೀ ಸೂರ್ಯನಾರಾಯಣ ರೆಡ್ಡಿ ಎನ್ (ಕುರುಗೋಡು)

ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 1997ರಲ್ಲಿ ಅಂಕೋಲ ಮತ್ತು ನೆಲ್ಲೂರ್‌ವರೆಗಿನ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಎನ್‌ಹೆಚ್–63 ಮೇಲ್ದರ್ಜೆಗೆ ಏರಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೇ,

ಆ) ಹಾಗಿದ್ದಲ್ಲಿ ಇಲ್ಲಿಯವರೆವಿಗೂ ಈ ರಾಷ್ಟ್ರೀಯ ಹೆದ್ದಾರಿಯನ್ನು ದುರಸ್ತಿಗೊಳಿಸದಿರಲು ಕಾರಣವೇನು,

ಇ) ದುರಸ್ತಿಗೊಳಿಸಿದ್ದಲ್ಲಿ, ಯಾವ ಸಾಲಿನಲ್ಲಿ ದುರಸ್ತಿಗೊಳಿಸಲಾಗಿದೆ ಮತ್ತು ದುರಸ್ತಿಗೊಳಿಸಿದ ದೂರ ಮತ್ತು ಅಂದಾಜು ಮೊತ್ತವೆಷ್ಟು?